ಡಿ .ಡಬ್ಲ್ಯೂ : 1

ದಿನಾಂಕ :07-12-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಎಸ್ ಆರ್ ವಕೀಲರಿಂದಃ

ಪಾಲು ಪಟ್ಟಿಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ . ನನ್ನ ತಂದೆ primary school ಓದಿರಬಹುದು . ನನ್ನ ತಂದೆ 10 ನೇ ತರಗತಿಯವರೆಗೆ ಓದಿದ್ದು ಅವರು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸುಳ್ಳು . ನಿಡಿ 1 ನನ್ನ ತಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡಿದ್ದಾರೆ ಅಂತ ಸಾಕ್ಷಿ ದಾಖಲೆ ನೋಡಿ ಹೇಳುತ್ತಾರೆ . ಸರ್ವೆ ನಂ . 162/ಪಿ ನನ್ನ ತಂದೆಗೆ ಬಂದಿದ್ದು ಪೂರ್ವಕ್ಕೆ ಈ ಕೇಸಿನ ವಾದಿಯ ತಂದೆ ಗುಡ್ಡಯ್ಯನ ಜಮೀನು ಅದು ಗುಡ್ಡಯ್ಯ ಮೃತ ಹೊಂದಿದ್ದರಿಂದ ವಾದಿಯ ಅಣ್ಣನಾದ ಜಯರಂಗಪ್ಪನಿಗೆ ಬಂದಿತ್ತು ಎಂದರೆ ಸರಿ . ಪಶ್ಚಿಮಕ್ಕೆ ಹನುಮಂತಯ್ಯನವರ ಜಮೀನು , ಉತ್ತರಕ್ಕೆ ಲಕ್ಷ್ಮಮ್ಮ ಗುಡ್ಡಯ್ಯ ಇವರ ಜಮೀನು , ನಿಡಿ 1 ರಲ್ಲಿ ಉತ್ತರಕ್ಕೆ ಯಾರ ಜಮೀನು ಇದೆ ಅಂತ ನಿಖರವಾಗಿ ಹೆಸರು ಬರೆದಿಲ್ಲ ಎಂದರೆ ಸರಿ . ದಕ್ಷಿಣಕ್ಕೆ ನಮ್ಮದೇ ಜಮೀನು , ನಿಡಿ 1 ರಲ್ಲಿ ದಕ್ಷಿಣಕ್ಕೆ ಗುಡ್ಡಯ್ಯ ನ ಜಮೀನು ಇದೆ ಎಂದರೆ ಸರಿ . ದಿಃ 26-06-1998 ರಲ್ಲಿ ವಾದಿ ಮತ್ತು ಜಯರಂಗಪ್ಪ ಪಾಲು ವಿಭಾಗ ಮಾಡಿಕೊಂಡರು ಎಂದರೆ ಇರಬಹುದು ನನಗೆ ಗೊತ್ತಿಲ್ಲ . ಆ ಪಾಲು ವಿಭಾಗದಲ್ಲಿ ಸರ್ವೆ ನಂ 162/2 ರಲ್ಲಿ 2 ಎಕರೆ 22 ಗುಂಟೆ ವಾದಿಗೆ ಬಂದಿದೆ ನನಗೆ ಗೊತ್ತಿಲ್ಲ . ಪಾಲು ವಿಭಾಗದ ಪ್ರಕಾರ ವಾದಿ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ . ವಾದಿಯವರ ಜಮೀನಿನ ಪಶ್ಚಿಮಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ . ಸರ್ವೆ ನಂ 162/2 ರ ಪಶ್ಚಿಮಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ. ಸದರಿ ಸರ್ವೆ ನಂ ಪೂರ್ವಕ್ಕೆ ಜಯರಂಗಪ್ಪ ಮತ್ತು ಗುಡ್ಡಯ್ಯ ನವರ ಜಮೀನು ಇದೆ ಎಂದರೆ ಸರಿ . ಉತ್ತರಕ್ಕೆ ಪುಟ್ಟರಂಗಮ್ಮ ನವರ

ಜಮೀನು ಇದೆ ಎಂದರೆ ಗೊತ್ತಿಲ್ಲ . ದಕ್ಷಿಣಕ್ಕೂ ನಮ್ಮ ಜಮೀನು ಇದೆ ಎಂದರೆ ಸರಿ . ಸರ್ವೆ ನಂ 162/2 ಇದರ ಮಾಲಿಕರು ವಾದಿಯವರು ಎಂದರೆ ಸರಿಯಲ್ಲ . ಸರ್ವೆ ನಂ 162/2 ಇದರ ಮಾಲಿಕರು ಸಿದ್ದಯ್ಯ , ಗುಡ್ಡಯ್ಯ ಆದರೆ ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ . ಗುಡ್ಡಯ್ಯ ಎಂದರೆ ವಾದಿಯ ತಂದೆ . ಸರ್ವೆ ನಂ 162/2 ವಾದಿಯಯವರ ಜಮೀನಿನ ದಕ್ಷಿಣ ದಿಕ್ಕಿಗೆ ನಮ್ಮ ಜಮೀನು ಇದೆ ಎಂದರೆ ಸರಿ . ದಕ್ಷಿಣ ದಿಕ್ಕಿನಲ್ಲಿ ನಾನು 7 ಗುಂಟೆ ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ . 7 ಗುಂಟೆ ಪೂರ್ವಕ್ಕೆ ಗುಡ್ಡಯ್ಯನ ಜಮೀನು , ಪಶ್ಚಿಮಕ್ಕೆ ಲಿಂಗಪ್ಪನ ಜಮೀನು , ಉತ್ತರಕ್ಕೆ ವಾದಿಯವರ ಜಮೀನು , ದಕ್ಷಿಣಕ್ಕೆ ಪ್ರತಿವಾದಿಯವರ ಜಮೀನು ಎಂದರೆ ಸರಿ . Survey Commissioner ಸದರಿ ಜಮೀನಿಗೆ ಸರ್ವೆ ಮಾಡಿ ಪ್ರತಿವಾದಿಗಳು 7 ಗುಂಟೆ ಒತ್ತುವರಿ ಮಾಡಿದ್ದಾರೆ ಅಂತ ವರದಿ ನೀಡಿದ್ದಾರೆ ಎಂದರೆ ಸುಳ್ಳು .ಗುಡ್ಡಯ್ಯ ನನ್ನ ತಾತ ವಾದಿ ಬಂದು ನನ್ನ ತಂದೆಗೆ ಒತ್ತುವರಿ ಬಗ್ಗೆ ಕೇಳಿದರು ಎಂದರೆ ಸುಳ್ಳು . ವಾದಿ ಬಂದು ನನ್ನ ತಂದೆ ಬಳಿ ನೀವು 7 ಗುಂಟೆ ಒತ್ತುವರಿ ಮಾಡಿದ್ದೀರ ಅದನ್ನು ಬಿಟ್ಟೆ ಬಿಡಿ ಕೋರ್ಟ ಕಚೇರಿಗೆ ಹೋಗುವುದು ಬೇಡ ಅಂತ ಹೇಳಿದರು ಎಂದರೆ ಸುಳ್ಳು . ಆ ನಂತರ ಅವರು ಪೋಲೀಸ್ ಠಾಣೆಗೆ ಬಂದು ಒತ್ತುವರಿ ಜಾಗವನ್ನು ಬಿಡಿಸಿಕೊಡಿ ಅಂತ ದೂರು ಕೊಟ್ಟಿದ್ದಾರೆ ಎಂದರೆ ಸುಳ್ಳು . ವಾದಿಯ ಅಣ್ಣ ಜಯರಂಗಪ್ಪ ವಕೀಲರು ಸಹ ಬಂದು ಒತ್ತುವರಿ ಜಾಗ ಬಿಟ್ಟುಕೊಡಿ ಅಂತ ನನ್ನ ತಂದೆ ಕೇಳಿದರು ಎಂದರೆ ಸರಿಯಲ್ಲ . ನಾನು ಬಿಟ್ಟಿಕೊಡುವುದಿಲ್ಲ ಎಂದು ಹೇಳಿದಕ್ಕೆ ವಾದಿಯವರು ಬಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ . ADLR ಆದೇಶ ಪ್ರಶ್ನಿಸಿ ನಾವು DDLR ಬಳಿ ಅಪೀಲು ಸಲ್ಲಿಸಿದ್ದೇವೆ ಎಂದರೆ ಸರಿ . ಅಪೀಲು ಏನಾಗಿದೆ ನನಗೆ ಗೊತ್ತಿಲ್ಲ .DDLR ನಲ್ಲಿ ಇದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಅಂತ ಅಪೀಲನ್ನು ಪೆಂಡಿಂಗ್ ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . DDLR ನಲ್ಲಿ ಏನಾಗಿದೆ ಅಂತ ದಾಖಲೆ ನಾನು ಈ ಕೇಸಿನಲ್ಲಿ ಕೊಟ್ಟಿದ್ದೇನೆ . ಪ್ರತಿವಾದ ಪತ್ರ ನಾನೇ ಹೇಳಿ ಬರೆಸಿದ್ದೇನೆ . ಸರ್ವೆ ನಂ 162 ರಲ್ಲಿ 20 ಗುಂಟೆ ರಸ್ತೆಗೆ ಹೋಗಿದೆ ಅಂತ ಹೇಳಿದ್ದು ಅದಕ್ಕೆ ದಾಖಲೆ ನಾನು ಹಾಜರುಪಡಿಸಿಲ್ಲ . ಪಾಲು ಪಟ್ಟಿಯಲ್ಲಿಯೂ ಸಹ 20 ಗುಂಟೆ

ರಸ್ತೆಗೆ ಸ್ವಾದೀನಪಡಿಸಿಕೊಂಡಿದ್ದಾರೆ ಅಂತ ಹೇಳಿ ಬರೆಸಿಲ್ಲ . ಸರ್ವೆ ನಂ 162 ರಲ್ಲಿ 5 ಎಕರೆ 20 ಗುಂಟೆಗೆ ನಾವೇ ಮಾಲೀಕರು ಎಂದರೆ ಸರಿ ಆದರೆ ಈಗ 10 ಗಂಟೆ ರಸ್ತೆಗೆ ಹೋಗಿದೆ . ಪಾಲು ಪಟ್ಟಿಯಲ್ಲಿ ನಾವು ಹೀಗೆ 10 ಗುಂಟೆ ರಸ್ತೆಗೆ ಹೋಗಿದೆ ಅಂತ ನಾವು ಬರೆಸಿಲ್ಲ .ಸರ್ವೆ ನಂ 162 ರ ಆರ್ ಟಿ ಸಿ ನಾನು ಹಾಜರುಪಡಿಸಿಲ್ಲ .ವಾದಿಯವರು ಅನಕ್ಷರಸ್ಥರು ಇದ್ದು ಅವರಿಗೆ ನಾನು ಕಿರುಕುಳ ಕೊಡುತ್ತ ಒತ್ತುವರಿ ಮಾಡಿ ಹಿಂಸೆ ಕೊಡುತ್ತಿದ್ದೀನಿ ಎಂದರೆ ಸರಿಯಲ್ಲ ಅವರೆ ನಮಗೆ ಹಿಂಸೆ ಕೊಡುತ್ತಾರೆ ಎಂದು ಹೇಳುತ್ತಾರೆ . ವಾದಿಯವರು 4 ಬಾರಿ ಪೋಲಿಸರಿಗೆ ನನ್ನ ವಿರುದ್ದ ದೂರು ನೀಡಿದ್ದಾರೆ ಎಂದರೆ ಹೌದು ನನ್ನನ್ನು ಹೆದರಿಸಲು ನನಗೆ ಹಾಗೆ ಮಾಡುತ್ತಾರೆ . ನಾನೇ ವಾದಿಯವರಿಗೆ ಹೆದರಿಸುತ್ತಿದ್ದೀನಿ ಎಂದರೆ ಸರಿಯಲ್ಲ . ಸರ್ವೆ ನಂ 159/1 ರಲ್ಲಿ 26 ಗುಂಟೆ ಇದೆ ಎಂದರೆ ಗೊತ್ತಿಲ್ಲ . ಅದರ ಪೂರ್ವಕ್ಕೆ ಸರ್ಕಾರಿ ರಸ್ತೆ , ಪಶ್ಚಿಮಕ್ಕೆ ಜಯರಂಗಪ್ಪನ ಜಮೀನು , ಉತ್ತರಕ್ಕೆ ಕರಿಯಣ್ಣರವರ ಜಮೀನು , ದಕ್ಷಿಣಕ್ಕೆ ಪ್ರತಿವಾದಿ ಲಿಂಗಪ್ಪನವರ ಜಮೀನು ಎಂದರೆ ಸರಿ .ಇದು 26 ಗುಂಟೆ ಇದೆ ಎಂದರೆ ಸರಿ . ಆ ಜಮೀನಿನ ದಕ್ಷಿಣ ದಿಕ್ಕಿಗೆ 5 ಗುಂಟೆ ನಾನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಸದರಿ 5 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ , ಪಶ್ಚಿಮಕ್ಕೆ ಜಯರಂಗಪ್ಪನವರ ಜಮೀನು , ಉತ್ತರಕ್ಕೆ ವಾದಿಯವರ ಜಮೀನು ಎಂದರೆ ಅಲ್ಲ ಕರಿಯಣ್ಣನವರ ಜಮೀನು, ದಕ್ಷಿಣಕ್ಕೆ ನನ್ನ ಜಮೀನು ಎಂದರೆ ಸರಿ . ಇದು 5 ಗುಂಟೆ ಚಕ್ಕುಬಂದಿ ಎಂದರೆ ಗೊತ್ತಿಲ್ಲ . ಈ 5 ಗುಂಟೆಯನ್ನು ನಾನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಸರ್ವೆ ನಂ 160/8 ರಲ್ಲಿ 1 ಎಕರೆ 31 ಗುಂಟೆ ಎಂದರೆ ಸರಿ . ಈ ಮೂರು ಸರ್ವೆ ನಂಬರುಗಳು ವಾದಿ ಮತ್ತು ಜಯರಂಗಪ್ಪನಿಗೆ ಪಾಲು ವಿಭಾಗದ ಮೂಲಕ ವಾದಿಯ ಭಾಗಕ್ಕೆ ಬಂದಿವೆ ಅಂದರೆ ಬಂದಿರಬಹುದು ನನಗೆ ಗೊತ್ತಿಲ್ಲ . ಸರ್ವೆ ನಂ 160/8 ಇದರ ಪೂರ್ವಕ್ಕೆ ಪ್ರತಿವಾದಿ ಲಿಂಗಪ್ಪನ ಜಮೀನು ಎಂದರೆ ಸರಿ . , ಪಶ್ಚಿಮಕ್ಕೆ ಗುಡ್ಡಯ್ಯನವರ ಜಮೀನು ಎಂದರೆ ಸರಿ. , ಉತ್ತರಕ್ಕೆ ಜಯರಂಗಪ್ಪನವರ ಜಮೀನು ಎಂದರೆ ಗೊತ್ತಿಲ್ಲ , ದಕ್ಷಿಣಕ್ಕೆ ರಂಗಸ್ವಾಮಯ್ಯನವ ರ ಜಮೀನು . ಆ ಸರ್ವೆ ನಂಬರ್ ನಲ್ಲಿ 9 ಗುಂಟೆ ಪೂರ್ವ

ದಿಕ್ಕಿಗೆ ಬರುತ್ತದೆ ಎಂದರೆ ಸರಿ . ಪೂರ್ವಕ್ಕೆ ನಮ್ಮ ಜಮೀನು ಎಂದರೆ ಸರಿ . , ಪಶ್ಚಿಮಕ್ಕೆ ವಾದಿಯವರ ಜಮೀನು ಎಂದರೆ ಸರಿ . , ಉತ್ತರಕ್ಕೆ ಜಯರಂಗಪ್ಪ ನವರ ಜಮೀನು ಎಂದರೆ ಗೊತ್ತಿಲ್ಲ , ದಕ್ಷಿಣ ರಂಗಸ್ವಾಮಯ್ಯನವ ರ ಜಮೀನು ಎಂದರೆ ಸರಿ . ಈ ಚಕ್ಕುಬಂದಿಯಲ್ಲಿ 9 ಗುಂಟೆ ಬರುತ್ತದೆ ಎಂದರೆ ಸುಳ್ಳು . ಈ 9 ಗುಂಟೆ ನಾನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಈ ಮೂರು ಜಮೀನಿನಲ್ಲಿ ನಾವು ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಈ ಮೇಲೆ ಹೇಳಿದ ಸರ್ವೆ ನಂಬರ್ ಗಳಲ್ಲಿ ವಾದಿಗೆ ಮಾಲಿಕತ್ವವಿದ್ದು ನಮಗೆ ಅದರಲ್ಲಿ ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ . ಈ ಸರ್ವೆನಂಬರ್ ಗಳು ನಮ್ಮದೇ ಎಂದು ತೋರಿಸಲು ಯಾವುದೇ ಕಂದಾಯ ದಾಖಲೆಗಳು ನಮ್ಮ ಬಳಿ ಇಲ್ಲ . ನನಗೆ ಕನ್ನಡ ಓದಲು ಬರೆಯಲು ಬರುತ್ತದೆ . ನಿಪಿ1 ಆರ್ ಟಿ ಸಿ ವಾದಿಯ ಹೆಸರಿನಲ್ಲಿ ಇದೆ ಅಂತ ಸಾಕ್ಷಿ ದಾಖಲೆ ನೋಡಿ ಹೇಳುತ್ತಾರೆ . ನಿಪಿ 4 ಇದು ವಾದಿಗೆ ಪಾಲು ವಿಭಾಗದಲ್ಲಿ ಬಂದಿದೆ ಅಂತ ಆರ್ ಟಿ ಸಿ ಯಲ್ಲಿ ಇದೆ ಅಂತ ಸಾಕ್ಷಿ ದಾಖಲೆ ನೋಡಿ ಹೇಳುತ್ತಾರೆ . ನಿಪಿ 7 ಇದು ವಾದಿಗೆ ಪಾಲು ವಿಭಾಗದಲ್ಲಿ ಬಂದಿದೆ ಅಂತ ಆರ್ ಟಿ ಸಿ ಯಲ್ಲಿ ಇದೆ ಅಂತ ಸಾಕ್ಷಿ ದಾಖಲೆ ನೋಡಿ ಹೇಳುತ್ತಾರೆ . ನಿಪಿ 8 ಇದು ವಾದಿಗೆ ಪಾಲು ವಿಭಾಗದಲ್ಲಿ ಬಂದಿದೆ ಅಂತ ಆರ್ ಟಿ ಸಿ ಯಲ್ಲಿ ಇದೆ ಅಂತ ಸಾಕ್ಷಿ ದಾಖಲೆ ನೋಡಿ ಹೇಳುತ್ತಾರೆ . ಈ ಮೇಲೆ ದಾಖಲೆಗಳು ವಾದಿಗೆ ಪಾಲು ವಿಭಾಗದಲ್ಲಿ ಆಸ್ತಿ ಬಂದಿವೆ ಅಂತ ತೋರಿಸುತ್ತವೆ ಎಂದರೆ ಇರಬಹುದು . ಅವು ಅವರ ಮಾಲಿಕತ್ವದ ಆಸ್ತಿಗಳು ಎಂದರೆ ಸರಿ . ನಮ್ಮ ಜಮೀನಿನಲ್ಲಿ 10 ಗುಂಟೆ ರಸ್ತೆಗೆ ಹೋಗಿಲ್ಲ ನಾನು ವಾದಿಯವರ ಜಮೀನುಗಳಲ್ಲಿ ಒತ್ತುವರಿ ಮಾಡಿ ಅದನ್ನು ಬಿಟ್ಟುಕೊಡಲು ತಯಾರಿಲ್ಲ ಆದ್ದರಿಂದ ಅವರು ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ . ನನ್ನ ತಂದೆ ಆರೋಗ್ಯವಾಗಿ ಚೆನ್ನಾಗಿ ಇದ್ದಾರೆ ಎಂದರೆ ಅವರಿಗೆ ಕಾಲು ಮುರಿತ ಆಗಿದೆ ಎಂದು ಹೇಳುತ್ತಾರೆ . ನನ್ನ ಬಳಿ ಬೈಕ್ ಇದೆ ಎಂದರೆ ಸರಿ . ನಾನು ನನ್ನ ತಂದೆಯನ್ನು ಬೆದರಿಸಿ ವಾದಿಯವರ ವಿರುದ್ದ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ . ರಸ್ತೆ ಯಾವಾಗ ಆಗಿದೆ ನನಗೆ ಗೊತ್ತಿಲ್ಲ .

ಪಾಲು ಪಟ್ಟೆ ಆದಾಗ ರಸ್ತೆ ಆಗಿತ್ತು ಅದರಲ್ಲಿ ನಾವು 10 ಗುಂಟೆ ರಸ್ತೆಗೆ ಹೋ೯ಗಿತ್ತು ಅಂತ ತೋ೯ರಿಸಬಹುದಿತ್ತು ಎಂದರೆ ಸರಿಯಲ್ಲ . ನಾವು ದಾವಾ ಐಟಂ ನಂ 1 ರಿಂದ 3 ಒತ್ತುವರಿ ಮಾಡಿಕೊಂಡು ವಾದಿಯವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

sd/-

(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .